

# ಬೆಂಕಿ ಕಡ್ಡಿ ಮರ!



ಬೆಂಕಿ ಕಡ್ಡಿ ದೀಪ ಬೆಳಗಲು, ಒಲೆ ಹೊತ್ತಿಸಲು, ಬೆಂಕಿ ಉರಿಸಲು ಮಾತ್ರ ಬಳಕೆಯಾಗುವುದು ಗೊತ್ತು. ಇದರಿಂದ ಸುಂದರ ಕಲಾಕೃತಿಗಳನ್ನೂ ಮಾಡಬಹುದು ಎಂಬುದನ್ನು ಅನೇಕ ಕಲಾವಿದರು ಸಾಬೀತುಪಡಿಸಿದ್ದಾರೆ. ಆದರೆ ಇಲ್ಲೊಂದು ಅಚ್ಚರಿ ಇದೆ. ಬೆಂಕಿ ಕಡ್ಡಿಗಳನ್ನು ನಾಜೂಕಾಗಿ ಜೋಡಿಸಿ ಮರವನ್ನು ಸೃಷ್ಟಿಸಲಾಗಿದೆ.

ಈ ಬೆಂಕಿ ಕಡ್ಡಿ ಮರವನ್ನು ಮಾಡಿದ್ದು ನೆದರ್‌ಲಂಡ್‌ನ ಸ್ಟೀಫನ್ ಫಿಶರ್ ಎಂಬ ಕಲಾವಿದ. ಒಂದು ಮರದ ರಚನೆಗೆ ಆತ ಬಳಸಿದ್ದು ಅಂದಾಜು 5 ಸಾವಿರ ಕಡ್ಡಿಗಳು. ಕೆಲವು ವಿನ್ಯಾಸದ ಮರಗಳಲ್ಲಿ ಮರದ ಬೇರು, ಕಾಂಡ, ಎಲೆ ಎಲ್ಲವೂ ಬಹಳ ಅಚ್ಚುಕಟ್ಟಾಗಿ ಜೋಡಿಸಿದ್ದು ವಿಶೇಷ. ನೋಡಲೂ ಆಕರ್ಷಕವಾಗಿರುವ ಈ ಬೆಂಕಿ ಕಡ್ಡಿ ಮರ ಕಲೆಗಾರಿಕೆಯ ವೈವಿಧ್ಯಕ್ಕೆ ಸಾಕ್ಷಿಯಾಗಿದೆ.

ಅಂದ ಹಾಗೆ ಬೆಂಕಿಕಡ್ಡಿಗಳನ್ನು ತಯಾರಿಸುವುದು ಪೈನ್ ವುಡ್, ಆಸ್ಪನ್, ಬಾಸ್ ವುಡ್, ವೈಟ್ ಪೈನ್ ಮರಗಳಿಂದ. ಈ ಕಡ್ಡಿಗಳಿಗೆ ಬಳಸುವ ಮದ್ದಿಗೆ ವಿವಿಧ ರಾಸಾಯನಿಕ ಪದಾರ್ಥಗಳನ್ನು ಬಳಸುತ್ತಾರೆ. ಬೆಂಕಿಕಡ್ಡಿಗಳಿಗೆ ಬಳಸುವ ಮರಗಳನ್ನು ವಿಶ್ವದ ನಾನಾ ಭಾಗಗಳಲ್ಲಿ ಬೆಳೆಯುತ್ತಾರೆ. ಕಲಾತ್ಮಕತೆ, ಸೃಜನಶೀಲತೆ ಮಿಳಿತಗೊಂಡರೆ ಸುಂದರ ಕಲಾಕೃತಿ ಸೃಷ್ಟಿ ಸಾಧ್ಯ ಎಂಬುದನ್ನು ಈ ಮರ ಸಾಬೀತುಪಡಿಸಿದೆ.

■ ಅವನೀಶ್